


**ಗುರೂಜಿ ಕೃಷ್ಣಾನಂದ (1939-2012)**

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

# ಬೆಳಕಿನ ಸಂಚಲನ

ಸಂಪುಟ 4, ಸಂಚಿಕೆ 2 ದ್ವೈಮಾಸಿಕ ವಾರ್ತಾಪತ್ರ ಸೆಪ್ಟೆಂಬರ್–ಅಕ್ಟೋಬರ್ 2016

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ 7ನೇ ಮಾರ್ಚ್ 1999ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಧ್ಯಾನ ಮಾಡುವುದರಿಂದ ಮತ್ತು ನಮ್ಮ ಭಾವನೆಗಳು ಮತ್ತು ಆಲೋಚನೆಗಳನ್ನು ಸಕಾರಾತ್ಮಕಗೊಳಿಸಿ ಕೊಳ್ಳುವುದರಿಂದ ಶಾಂತಿ ಮತ್ತು ಸಂತೋಷಗಳನ್ನು ಪಡೆಯಬಹುದೆನ್ನುವುದು ನನ್ನ ಸ್ವಂತ ಅನುಭವ. ನಮ್ಮ ಲೌಕಿಕ ಜೀವನದಲ್ಲಿ ಐಶ್ವರ್ಯನ್ನಲ್ಲದಿದ್ದರೂ, ಅಸಾಧಾರಣ ನೆಮ್ಮದಿಯನ್ನು ಇದು ಖಂಡಿತವಾಗಿ ತರುತ್ತದೆ.

ನಾವು ಧ್ಯಾನ ಮಾಡಿದರೆ ಮತ್ತು ಸಕಾರಾತ್ಮಕಗೊಂಡರೆ, ನಮ್ಮ ಭಾವನೆ ಹಾಗೂ ಆಲೋಚನೆಗಳು ಸಕಾರಾತ್ಮಕತೆಯನ್ನು ಹೊರಹೊಮ್ಮಿಸುತ್ತವೆ. ನಾವು ಸಕಾರಾತ್ಮಕ ಕಂಪನಗಳ ಒಂದು ವಲಯವಾಗುತ್ತೇವೆ. ಈ ಸಕಾರಾತ್ಮಕ ಕಂಪನಗಳು ನಮ್ಮ ಸುತ್ತ ಇರುವ ಪ್ರತಿಯೊಬ್ಬರಿಂದ ಸಕಾರಾತ್ಮಕವಾದ ಪ್ರತಿಕ್ರಿಯೆಗಳನ್ನು ಮಾತ್ರವೇ ಆಕರ್ಷಿಸುತ್ತವೆ.

ಜನರು ನಮ್ಮ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸಹಾಯ ಮಾಡುತ್ತಾರೆ. ಪ್ರತಿಯೊಂದು ಸಣ್ಣ ವಿಷಯದಲ್ಲೂ ಕೂಡ ಸಹಾಯವನ್ನು ಪಡೆಯುತ್ತೇವೆ. ಅಪರಿಚಿತ ವ್ಯಕ್ತಿಯು ಕರುಣೆತೋರಿ ನಮಗೆ ಸಹಾಯ ಮಾಡುತ್ತಾರೆ. ಎಲ್ಲಾ ಸಮಸ್ಯೆಗಳು ಮಾಯವಾಗುತ್ತವೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ನಿಮಗಿದರ ಅನುಭವವಾಗಬೇಕು

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಕಳೆದ ಎರಡು ತಿಂಗಳಿಂದ ನಮ್ಮ ಕಾರ್ಯಕರ್ತರು ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವುದರಲ್ಲಿ, ಶಾಂತಿಯನ್ನು ಹರಡುವುದರಲ್ಲಿ ಹಾಗೂ ಲೈಟ್ ಚಾನಲ್ ಮಾಡುವುದರಿಂದ ಉಂಟಾಗುವ ಪ್ರಯೋಜನಗಳನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಬಹಳ ಕ್ರಿಯಾಶೀಲರಾಗಿದ್ದಾರೆ. 500ಕ್ಕೂ ಹೆಚ್ಚು ಶಾಲೆಗಳಿಗೆ ಭೇಟಿ ನೀಡಿ ಸುಮಾರು 2 ಲಕ್ಷ ಮಕ್ಕಳಿಗೆ ಲೈಟ್ ಚಾನಲ್ ಮಾಡುವುದನ್ನು ಕಲಿಸಿದ್ದಾರೆ.

ಮಹರ್ಷಿ ಅಮರರವರು ಹಾಗೂ ಇತರೆ ಬೆಳಕಿನ ಮಾಸ್ಟರ್‌ಗಳು ಹಾಕಿಕೊಟ್ಟ ಬುನಾದಿಯ ಮೇಲೆ ಹೊಸ ಯುಗವನ್ನು ನಿರ್ಮಾಣ ಮಾಡಲು ನಮ್ಮ ಕಾರ್ಯಕರ್ತರು ಸದ್ದಿಲ್ಲದೆ ಮುಂದಿನ ಪೀಳಿಗೆಯನ್ನು ತಯಾರು ಮಾಡು ತ್ತಿದ್ದಾರೆ. ಹೊಸಯುಗ ತನ್ನಷ್ಟಕ್ಕೆ ತಾನೇ ಬರುವುದಿಲ್ಲ. ಹೊಸಯುಗವನ್ನು ನಿರ್ಮಿಸಲು, ಹೊಸಯುಗ ದೊಳಗೆ ನಮ್ಮನ್ನು ಇನ್ನೂ ಮುಂದೆ ಕರೆದುಕೊಂಡು ಹೋಗಲು, ಜನರು ಹೊಸಯುಗವನ್ನು ಆಯ್ಕೆ ಮಾಡಿಕೊಳ್ಳ ಬೇಕು ಹಾಗೂ ಅದನ್ನು ಅಭಿವ್ಯಕ್ತಗೊಳಿಸಬೇಕು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಮಹರ್ಷಿ ಅಮರರವರಂತಹ ಮಾಸ್ಟರ್‌ಗಳು ಜನನ ಮರಣದ ಚಕ್ರವನ್ನು ಮೀರಿರುತ್ತಾರೆ. ಅವರು ವಿನಯಶೀಲರು. ಮನುಕುಲದ ಬಗೆಗಿನ ಅವರ ಪ್ರೀತಿ ಹಾಗೂ ಬೆಳಕಿನ ಕಾರ್ಯದ ಬಗೆಗಿನ ಅವರ ಬದ್ಧತೆ ಅವರನ್ನು ಈ ಭೂಮಿಯ ಮೇಲೆ ಪದೇ ಪದೇ ತರುತ್ತದೆ. ಈ ಸಂಕ್ರಮಣ ಕಾಲದಲ್ಲಿ ಮನುಕುಲಕ್ಕೆ ಸಹಾಯ ಮಾಡುವುದು ಹಾಗೂ ಹೊಸಯುಗದೆಡೆಗೆ ಮಾರ್ಗದರ್ಶಿಸುವುದು ಅವರ ಪ್ರಮುಖ ಕಾರ್ಯವಾಗಿದೆ. ಅವರ ಈ ಕಾರ್ಯವನ್ನು ಪೂರ್ಣಗೊಳಿಸಲು ಅವರು ಪುನಃ ಜನ್ಮತಾಳುತ್ತಾರೆ.

ಈ ಕಾರ್ಯಕ್ಕೆ ಸಮರ್ಪಿಸಿಕೊಂಡಿರುವ ನಮ್ಮ ಕಾರ್ಯಕರ್ತರ ಏಕನಿಷ್ಠೆಯ ಕೆಲಸ ಲೈಟ್ ಚಾನಲಿಂಗ್ ಕೆಲಸಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಿದೆ. ಅವರ ನಿರಂತರ ಪ್ರಯತ್ನದಿಂದಾಗಿ, ನೂರಾರು ಶಾಲೆಗಳು ತಮ್ಮ ಅಸೆಂಬ್ಲಿ ಸೆಷನ್‌ಗಳಲ್ಲಿ ನಿಯತವಾಗಿ ಲೈಟ್ ಚಾನಲ್ ಮಾಡುತ್ತಿವೆ. ಅವರು ಶಾಂತಿಯ ಕಂಪನಗಳನ್ನು ತಮ್ಮ ಪರಿಸರದಲ್ಲಿ ಹಾಗೂ ಪ್ರಪಂಚಕ್ಕೂ ಕೂಡ ಹರಡುತ್ತಿದ್ದಾರೆ.

ಪ್ರೀತಿ ಮತ್ತು ಬೆಳಕನ್ನು ಈ ಪ್ರಪಂಚದ ಮೇಲೆ ಹರಡುವುದು, ಈ ಮಹಾನ್ ಮಾಸ್ಟರ್ ಅಮರರವರಿಗೆ ಸಲ್ಲಿಸಬಹುದಾದ ಸೂಕ್ತವಾದ ಗೌರವದ ಕಾಣಿಕೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು–560077 ಭಾರತ.
ಫೋನ್: (080) 2846 5280, 99000 75280 (10am to 4pm) ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7.00 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

**ಸೋಮವಾರ (ಸಂಜೆ 6.30 -7.00)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7.00)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 – 7.00)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶನಿವಾರ (ಸಂಜೆ 6.30 – 7.00)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್,
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.



ಮುಂಬಯಿಯಲ್ಲಿನ ಕ್ಯಾನ್ಸರ್ ರೋಗಿಗಳಿಗೆ ಲೈಟ್ ಚಾನಲಿಂಗ್ ಸೆಷನ್‌ವೊಂದನ್ನು ಏಪ್ರಿಲ್ 25, 2016ರಂದು ನಡೆಸಲಾಯಿತು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ನಾವು ನಿಜವಾಗಿಯೂ ವಿನಮ್ರರಾಗಿದ್ದಾಗ, ದೇವರು ನಮ್ಮ ಮೂಲಕ ಕೆಲಸ ಮಾಡುತ್ತಾನೆ.
- ಒಬ್ಬ ವ್ಯಕ್ತಿಯು ತನ್ನ ಭವಿಷ್ಯವನ್ನು ಬದಲಾಯಿಸಬಹುದು. ಒಟ್ಟುಗೂಡಿ, ಜನರು ಒಂದು ಪ್ರದೇಶದ ವಿಧಿಯನ್ನು ಬದಲಾಯಿಸಬಹುದು.
- ಸಂತೋಷವೆನ್ನುವುದು ನಮ್ಮ ಮನಸ್ಸಿನ ಒಂದು ಸ್ಥಿತಿ, ಇದು ಹೊರಗಿನ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿಲ್ಲ.
- ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದೆ. ಇದನ್ನು ಒಪ್ಪಿಕೊಳ್ಳುವುದು ಕಷ್ಟವಾಗಬಹುದು, ಅರ್ಥಮಾಡಿಕೊಳ್ಳುವುದು ಕಷ್ಟವಾಗಬಹುದು. ಆದರೆ, ಸತ್ಯವೇನೆಂದರೆ, ಎಲ್ಲಾ ಸಮಸ್ಯೆಗಳಿಗೂ ಪರಿಹಾರ ವ್ಯಕ್ತಿಯಿಂದ ಪ್ರಾರಂಭವಾಗುತ್ತದೆ. ನಮ್ಮ ಆಂತರ್ಯದ ಮೂಲತತ್ವದೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡಾಗ ಮಾತ್ರ ಈ ಪರಿಹಾರಗಳು ಸಾಧ್ಯವಾಗುತ್ತವೆ.

  ನಮ್ಮೊಳಗಿನ ದೇವರೇ ಆಗಿರುವ ಈ ಆಂತರ್ಯದ ಮೂಲತತ್ವವು ಅಗಾಧವಾದ ಶಕ್ತಿ ಮತ್ತು ಅನಂತವಾದ ವಿವೇಕವನ್ನು ಹೊಂದಿದೆ. ಈ ಸಂಪರ್ಕದಿಂದ ನಾವು ಸಾಧಿಸಲಾಗದೇ ಇರುವುದು ಅಥವಾ ಪರಿಹರಿಸಲಾಗದೇ ಇರುವುದು ಏನಿದೆ?
- ಪ್ರೀತಿಯು ಪ್ರಕೃತಿಯಲ್ಲಿನ ಅತ್ಯುನ್ನತವಾದ ಅಭಿವ್ಯಕ್ತಿ. ಎಲ್ಲಿ ಪ್ರೀತಿ ಇರುವುದೋ ಅಲ್ಲಿ ಶಾಂತಿ, ಸಂತೋಷ, ತೃಪ್ತಿ ಹಾಗೂ ಬೆಳಕು ಇರುತ್ತವೆ.
- ಪ್ರೀತಿ ಮತ್ತು ಸ್ವಾತಂತ್ರ್ಯದ ತತ್ವಗಳ ಆಧಾರದ ಮೇಲೆ ನಮ್ಮ ಜೀವನವಿದ್ದರೆ, ಸಮಾಜ, ಪ್ರಕೃತಿ ಹಾಗೂ ಇತರ ವ್ಯಕ್ತಿಗಳೊಂದಿಗೆ ನಾವು ಸಾಮರಸ್ಯದಿಂದ ಮತ್ತು ಶಾಂತಿಯಿಂದ ಬದುಕಬಹುದು.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5075 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.65 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

# ದೈವೀ ಬೆಳಕನ್ನು ಹೊಂದಿರುವುದು

**ಗುರೂಜಿ ಕೃಷ್ಣಾನಂದ; ಅನು: ಶ್ರೀದೇವಿ**

ಪ್ರತಿದಿನ ಬೆಳಿಗ್ಗೆ ನಿಮ್ಮ ದಿನ ಪ್ರಾರಂಭವಾಗುವಾಗ, ಕನಿಷ್ಠ 7 ನಿಮಿಷಗಳ ಕಾಲ ದೈವೀ ಬೆಳಕನ್ನು ಇಡೀ ಪ್ರಪಂಚಕ್ಕೆ ಚಾನಲ್ ಮಾಡಲು ಹಾಗೂ ಹರಡಲು ನಿಮಗೆ ಸಲಹೆ ನೀಡುತ್ತೇನೆ.

ಹಾಗೂ ನೀವು ಕೆಲಸಕ್ಕೆ ಅಥವಾ ಇನ್ನಾವುದೇ ಕಾರಣಕ್ಕಾಗಿ ಮನೆಯಿಂದ ಹೊರಗೆ ಹೋಗುವಾಗ ಕೆಲವು ನಿಮಿಷಗಳ ಕಾಲ ನಿಮ್ಮೊಳಗೆ ಬೆಳಕನ್ನು ತುಂಬಿಕೊಳ್ಳಿ ಎಂದು ಸಲಹೆ ನೀಡುತ್ತೇನೆ. ದಿನವಿಡೀ ಜನರ ಜೊತೆ ವ್ಯವಹರಿಸಿವಾಗಲೆಲ್ಲಾ ನಿಮ್ಮಲ್ಲಿ ಬೆಳಕನ್ನು ಹೊಂದಿರಿ ಎಂದು ಸಲಹೆ ನೀಡುತ್ತೇನೆ.

ಬೆಳಕಿನಲ್ಲಿ ದೈವೀ ಚೈತನ್ಯಗಳಿವೆ. ನಾವು ಬೆಳಕನ್ನು ಹೊಂದಿರುವಾಗ ಈ ಚೈತನ್ಯಗಳನ್ನು ಕೂಡ ಹೊಂದಿರುತ್ತೇವೆ. ನಾವು ಜನರನ್ನು ಭೇಟಿಮಾಡಿದಾಗ, ಬೆಳಕಿನಲ್ಲಿರುವ ಈ ದೈವೀ ಚೈತನ್ಯಗಳು ಅವರಲ್ಲಿ ಪರಿವರ್ತನೆಯ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತವೆ.

ಈಗ, ಪ್ರಳಯದ ಚೈತನ್ಯಗಳನ್ನು ಕಾಲವು ಬಿಡುಗಡೆ ಮಾಡಿದೆ. ಪ್ರಳಯದ ಚೈತನ್ಯಗಳು ನಡೆಸುತ್ತಿರುವ ಪರಿವರ್ತನೆಯ ಪ್ರಕ್ರಿಯೆಯನ್ನು ಈ ಪ್ರಪಂಚವು ಹಾದು ಹೋಗುತ್ತಿದೆ (ಸಂಸ್ಕೃತದಲ್ಲಿ ಪ್ರಳಯವೆಂದರೆ, ಬದಲಾವಣೆ ಅಥವಾ ಪರಿವರ್ತನೆ, ಸಾಮಾನ್ಯವಾಗಿ ಅರ್ಥಮಾಡಿಕೊಂಡಿರುವಂತೆ ಅದು ವಿನಾಶವಲ್ಲ).

ನಾವು ಬೆಳಕನ್ನು ಹೊಂದಿದ್ದು ಜನರನ್ನು ಭೇಟಿಮಾಡಿದರೆ, ದೈವೀ ಚೈತನ್ಯಗಳು ಅವರಲ್ಲಿ ಪರಿವರ್ತನೆಯ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತವೆ. ಇದು ಅವರಲ್ಲಿರುವ ಸಕಾರಾತ್ಮಕ ಭಾವನೆಗಳನ್ನು ಹೊರತರಬಹುದು. ಆದರೆ, ಆಶ್ಚರ್ಯವೆಂದರೆ, ಕೆಲವು ಸಲ, ಈ ಚೈತನ್ಯಗಳು ಅವರಲ್ಲಿರುವ ಅಷ್ಟೇನೂ ಸಕಾರಾತ್ಮಕವಲ್ಲದ ಭಾವನೆಗಳನ್ನು ಕೂಡ ಹೊರತರುತ್ತವೆ.

ಇದು ಉಂಟಾಗಲು ಕಾರಣ, ಬೆಳಕಿನಲ್ಲಿರುವ ಪ್ರಳಯದ ಚೈತನ್ಯಗಳು, ಜನರ ನೈಜ ಸ್ವಭಾವವನ್ನು, ಅವುಗಳು ಒಳ್ಳೆಯದಿರಲಿ ಅಥವ ಅಲ್ಲದಿರಲಿ, ಹೊರತರುತ್ತದೆ.

ಇದು ಪ್ರಳಯದ ಚೈತನ್ಯಗಳ ಕಾರ್ಯ, ನಾವು ಅನುವು ಮಾಡಿಕೊಟ್ಟರೆ ಅವು ಅಂಧಕಾರವನ್ನು ಹೊರತೆಗೆದು ಪರಿಶುದ್ಧಗೊಳಿಸುತ್ತವೆ. ಇಂತಹ ಶುದ್ಧಗೊಳಿಸುವಿಕೆಯು ಸ್ವಯಂ–ವಿಚಾರಣೆಯೆಡೆಗೆ ಕೊಂಡೊಯ್ಯಬಹುದು ಹಾಗೂ ಅವರ ಜೀವನದ ಉದ್ದೇಶ ಹಾಗೂ ಉನ್ನತ ಸತ್ಯಗಳು ಮತ್ತು ಗುರಿಗಳ ಬಗ್ಗೆ ಅವರು ಯೋಚಿಸುವಂತೆ ಮಾಡಬಹುದು. ನಿಶ್ಚಲತೆ, ಶಾಂತಿ ಹಾಗೂ ದೇವರ ಅನುಭವಕ್ಕಾಗಿ ಅವರು ಹಂಬಲಿಸಲು ಪ್ರಾರಂಭಿಸಬಹುದು. ಅವರು ಪ್ರೀತಿಯನ್ನು ಪ್ರಕಟಿಸಲು ಪ್ರಾರಂಭಿಸಬಹುದು.

ಆದ್ದರಿಂದ, ನಾವು ಬೆಳಕನ್ನು ಹೊಂದಿರುವಾಗ, ನಮ್ಮ ಬೆಳವಣಿಗೆಯ ಜೊತೆಗೆ, ಯಾವುದೇ ಉದ್ದೇಶವಿಲ್ಲದಿದ್ದರೂ ಕೂಡ, ಇತರರಲ್ಲೂ ನಾವು ಆಧ್ಯಾತ್ಮಿಕ ಬೆಳವಣಿಗೆಯ ಪ್ರಕ್ರಿಯೆಯನ್ನು ಆರಂಭಿಸುತ್ತೇವೆ. ಪ್ರಜ್ಞಾಪೂರ್ವಕವಾಗಿ ನಾವು ಏನೂ ಮಾಡಬೇಕಾಗಿಲ್ಲ, ಕಾರಣ, ಬೆಳಕಿಗೆ ಏನು ಮಾಡಬೇಕೆಂದು ತಿಳಿದಿದೆ ಹಾಗೂ ಅದು ಎಲ್ಲವನ್ನೂ ಮಾಡುತ್ತದೆ.

ನೀವು ಇತರರಿಗೆ ಬೆಳಕನ್ನು ಕಳುಹಿಸುವುದು ಕೂಡ ಬೇಕಾಗಿಲ್ಲ; ನೀವು ಬೆಳಕನ್ನು ಹೊಂದಿರಬೇಕು ಅಷ್ಟೇ. ಇದೇ, ಬೆಳಕನ್ನು ಚಾನಲ್ ಮಾಡುವುದಕ್ಕೂ ಹಾಗೂ ಬೆಳಕನ್ನು ಹೊಂದಿರುವುದಕ್ಕೂ ಇರುವ ವ್ಯತ್ಯಾಸ. ಈ ದೈವೀ ಬೆಳಕನ್ನು ಹೊಂದಿರುವುದಷ್ಟರಿಂದಲೇ ನೀವು ಮಾನವಕುಲಕ್ಕೆ ಮಹದುಪಕಾರ ಮಾಡುವಿರಿ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಪ್ರತಿದಿನ (ಸಂಜೆ 7.00 - 7.30)**
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಭಾನುವಾರ (ಬೆಳಿಗ್ಗೆ 10.00 -10.30)**
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4 ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 4.00 - 4.30)**
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

**ಗುರುವಾರ (ಸಂಜೆ 7.45)**
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-Gat Plot No-135, ಸುಭಾಶ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಈ ವರ್ಷ ನನ್ನ ಮಗಳು 10ನೇ ತರಗತಿಯಲ್ಲಿದ್ದಳು. ಅವಳಿಗೆ ಗಣಿತ ತುಂಬಾ ಕಷ್ಟವಾದ ವಿಷಯ. ಗಣಿತದ ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚೆ 5 ದಿನಗಳ ರಜೆಯಿತ್ತು ಆದರೆ ಅವಳು ಬಹಳ ಒತ್ತಡಕ್ಕೆ ಒಳಗಾಗಿದ್ದಳು ಹಾಗೂ 2 ದಿನಗಳ ನಂತರ, ಅವಳು ತನಗೆ ಏನೂ ಗೊತ್ತಿಲ್ಲ, ಏನೂ ಜ್ಞಾಪಕವಿಲ್ಲವೆಂದು ಅಳುವುದಕ್ಕೆ ಶುರು ಮಾಡಿದಳು. ಆಗ ನಾನು ಅವಳಿಗೆ ಬೆಳಕನ್ನು ಕಳುಹಿಸಿದೆ ಹಾಗೂ ಅವಳಿಗೂ ಸಹ ಬೆಳಕನ್ನು ಚಾನಲ್ ಮಾಡುವಂತೆ ಹೇಳಿದೆ. ಪ್ರಶ್ನೆ ಪತ್ರಿಕೆ ಪ್ರತಿಯೊಬ್ಬರಿಗೂ ಕಷ್ಟಕರವಾಗಿತ್ತು. ನಾನು ಅವಳಿಗೆ ಬೆಳಕನ್ನು ಜ್ಞಾಪಿಸಿಕೊಳ್ಳುವಂತೆ ಹೇಳಿದ್ದೆ; ಅವಳು ಅದೇ ರೀತಿ ಮಾಡಿದಳು. CBSC ಬೋರ್ಡ್ ಫಲಿತಾಂಶ ಪ್ರಕಟವಾಗಿದೆ. ಒಟ್ಟಾರೆ 93% ಮತ್ತು ಗಣಿತದಲ್ಲಿ 91% ಅಂಕಗಳನ್ನು ಗಳಿಸಿದ್ದಾಳೆ. ಇದೆಲ್ಲಾ ಬೆಳಕಿನ ಸಹಾಯದಿಂದ ಮಾತ್ರ ಸಾಧ್ಯವಾಯಿತು.

– ಕ್ರಾಂತಿ ಧರ್ಮಧೇರೆ, ಲೈಟ್ ಚಾನಲ್

ನಾನು ಲೈಟ್ ಚಾನಲ್ ಮಾಡಿದಾಗ, ಉಲ್ಲಾಸ, ಶಾಂತಿ ಮತ್ತು ಸಂತೋಷದಿಂದ ಉತ್ಸಾಹಿಯಾಗಿರುತ್ತೇನೆ. ಪ್ರತಿ ದಿನವೂ ಹೊಸ ದಿನದಂತೆ ಭಾಸವಾಗುತ್ತದೆ. ತರಗತಿಗಳಲ್ಲಿ ಚುರುಕಾಗಿದ್ದು ಏಕಾಗ್ರತೆಯಿಂದ ಪಾಠಗಳನ್ನು ಕೇಳಲು ಸಾಧ್ಯವಾಗಿದೆ.

–ನೀತು ಪಿ, 9ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಪ್ರತಿ ದಿನ ಲೈಟ್ ಚಾನಲಿಂಗ್ ಮಾಡುವುದು ಒಳ್ಳೆಯದೆಂದು ಅನಿಸುತ್ತದೆ. ಇದೊಂದು ಹೊಸ ಅನುಭವ ಮತ್ತು ಬದುಕಿಗೆ ಹೊಸ ಅರ್ಥವನ್ನು ಕೊಡುತ್ತದೆ. ಬೆಳಕಿನಿಂದ ನಾವು ಪಡೆಯುವ ಚೈತನ್ಯಗಳು ನಮ್ಮ ಯೋಚನಾ ಶಕ್ತಿಯನ್ನು ವೃದ್ಧಿಸುತ್ತದೆ ಮತ್ತು ಆರೋಗ್ಯವನ್ನು ಸುಧಾರಿಸುತ್ತದೆ.

–ಗಗನ ಆರ್, 10ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ನಾನು ಲೈಟ್ ಚಾನಲ್ ಮಾಡಿದಾಗ ನನಗೆ ಸಂತೋಷ ಹಾಗೂ ಸಮಾಧಾನದ ಅನುಭವವಾಗುತ್ತದೆ. ನನ್ನ ಮನಸ್ಸು ಉಲ್ಲಾಸದಿಂದಿರುತ್ತದೆ. ನನಗೆ ಬೇಕಾದ ಎಲ್ಲಾ ಶಕ್ತಿಯನ್ನು ಬೆಳಕು ಕೊಡುತ್ತಿದೆ ಎಂದು ನನಗನಿಸುತ್ತದೆ. ದಿನದಿಂದ ದಿನಕ್ಕೆ ನನ್ನ ಏಕಾಗ್ರತೆ ಹೆಚ್ಚುತ್ತಿದೆ. ನನಗೆ ಒಂದು ವೇಳೆ ಸಮಸ್ಯೆ ಎದುರಾದರೆ, ಬೆಳಕು ನನ್ನ ಮನಸ್ಸನ್ನು ಸಮಾಧಾನದಿಂದ ಇರುವಂತೆ ಮಾಡುತ್ತದೆ. ಚಾನಲಿಂಗ್ ಮಾಡುವುದರ ಮೂಲಕ ಯಾವ ಸಮಯದಲ್ಲಿ ಬೇಕಾದರೂ ಈ ಚೈತನ್ಯವನ್ನು ನಾವು ಉಪಯೋಗಿಸಿಕೊಳ್ಳಬಹುದು.

–ರಿಶಿ, 9ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ಲೈಟ್ ಚಾನಲಿಂಗ್ ನನ್ನನ್ನು ಸಮಾಧಾನದಿಂದ ಇರುವಂತೆ ಮಾಡಿದೆ. ನನಗೆ ಸಮಸ್ಯೆ ಎದುರಾದರೆ, ಸ್ವಲ್ಪ ಸಮಯ ಲೈಟ್ ಚಾನಲಿಂಗ್ ಮಾಡುತ್ತೇನೆ. ಇದು ಆ ಸಮಸ್ಯೆಯನ್ನು ಮರೆಯುವಂತೆ ಮಾಡುತ್ತದೆ. ಒತ್ತಡ ಕಡಿಮೆಯಾಗುತ್ತದೆ.

–ಸಿರೀಶ ಸಿ. 9ನೇ ತರಗತಿ, ಬಸವೇಶ್ವರ ಹೈಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು

ನಾನು ಲೈಟ್ ಚಾನಲಿಂಗ್ ಮಾಡಿದಾಗ ನನ್ನ ಶರೀರದೊಳಗೆ ಚೈತನ್ಯವೊಂದು ಪ್ರವೇಶಿಸುತ್ತಿರುವ ಅನುಭವವಾಗಿ ಸಂತೋಷವಾಯಿತು. ಈಗ ನಾನು ಉದ್ವೇಗಕ್ಕೆ ಒಳಗಾಗುವುದಿಲ್ಲ ಮತ್ತು ಕೋಪಗೊಳ್ಳುವುದಿಲ್ಲ. ಸ್ನೇಹಿತರ ಜೊತೆಗೆ ಸ್ನೇಹದಿಂದಿರಬೇಕೆಂದು ಮತ್ತು ತಂದೆತಾಯಿಯರ ಜೊತೆಗೆ ಒಳ್ಳೆಯವಳಾಗಿರಬೇಕೆಂದು ಅನಿಸುತ್ತದೆ. ಯಾವುದೇ ಕೆಲಸದಲ್ಲಿ ಆತ್ಮ ವಿಶ್ವಾಸ ಮೂಡಿದೆ.

–ಲಕ್ಷ್ಮಿ ಕೆ ಎಸ್, 6ನೇ ತರಗತಿ, ಶ್ರೀ ಶಾರದ ಪ್ರೈಮರಿ ಸ್ಕೂಲ್, ಜಯನಗರ, ಬೆಂಗಳೂರು

ನಾನು ಪ್ರಯಾಣಿಸುತ್ತಿದ್ದ ಉಪನಗರದ ರೈಲಿನಲ್ಲಿ ನನ್ನ ಪಕ್ಕದಲ್ಲಿ ಕುಳಿತಿದ್ದ ಒಂದು ಚಿಕ್ಕ ಹುಡುಗಿ ಸಹಿಸಲಾಗದ ತೀವ್ರವಾದ ಹಲ್ಲುನೋವಿನಿಂದ ಜೋರಾಗಿ ಅಳುತ್ತಿದ್ದಳು. ಆ ಹುಡುಗಿಯ ತಂದೆ ಮತ್ತು ಅಲ್ಲಿ ಕುಳಿತಿದ್ದ ಪ್ರತಿಯೊಬ್ಬರೂ ಏನು ಮಾಡಲಾಗದೇ ಅಸಹಾಯಕರಾದರು ಹಾಗೂ ಹುಡುಗಿಯ ನಿರಂತರ ಅಳುವಿನಿಂದ ಆತಂಕಕ್ಕೆ ಒಳಗಾದರು. ನಾನು ಆ ಹುಡುಗಿಯ ಹಲ್ಲುನೋವು ಇರುವಂಥ ಜಾಗಕ್ಕೆ 10 ನಿಮಿಷಗಳವರೆಗೆ ಲೈಟ್ ಚಾನಲ್ ಮಾಡಿದೆ. ಸ್ವಲ್ಪ ಸಮಯದ ನಂತರ ಆ ಹುಡುಗಿ ತಾನು ತಲುಪಬೇಕಾದ ಸ್ಥಳದಲ್ಲಿ ನಗುನಗುತ್ತಾ ಇಳಿದಳು ಹಾಗೂ ಸ್ವಲ್ಪ ಸಮಯಕ್ಕೆ ಮುಂಚೆ ಹಲ್ಲು ನೋವಿದ್ದದ್ದೇ ಮರೆತುಹೋದಂತೆ ತೋರುತ್ತಿತ್ತು. ಇದರಿಂದ ಆ ಹುಡುಗಿಯು ತಂದೆಗೂ ಸಂತೋಷವಾಯಿತು.

ಒಂದು ಮಧ್ಯಾಹ್ನ ಆಫೀಸಿನಲ್ಲಿ ಕೆಲಸ ಮಾಡುವಾಗ ನನಗೆ ಬಹಳ ತೀವ್ರವಾದ ತಲೆನೋವು ಬಂತು. ಮನೆಗೆ ಹೋಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬೆಳಕನ್ನು ಚಾನಲ್ ಮಾಡಿದೆ ಹಾಗೂ ತಕ್ಷಣವೇ ತಲೆನೋವಿನಿಂದ ಉಪಶಮನ ಪಡೆದೆ.

–ರಾಜೇಂದ್ರ ರಂಗ್ನೇಕರ್, ಲೈಟ್ ಚಾನಲ್

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077
ಮುದ್ರಣ ಸ್ಥಳ : ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್ : 23380167 / 23209909 ಇಮೇಲ್: lotus.creation777@gmail.com ವೆಬ್‌ಸೈಟ್: www.lotusprinters.com
ಮಾಲೀಕರು; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು : ಶ್ರೀದೇವಿ